Regd No M 1299 SATYAVADI Founded

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 102] ಸೋಮವಾರ 23—2—48 [ಬಿಡಿ ಪ್ರತಿ 3 ಪೈ

ಕೋಮುವಾರು ಭೂತ ಮಟಹಾಕಿ

ಎರಡು ಸಾರ್ವಜನಿಕರಲ್ಲಿ ಏ ಐ ಸಿ ಸಿ ಯ ವಿನಂತಿ (ದೆಹಲಿ ವಾರ್ತೆ)

ಗಾಂಧೀಜಿ ಗೋವು ನಿರ್ಮಲೆ

ನಿರ್ಮಲೆಯು ಸಾಧುಶೀಲೆ. ನಿಂಬೇ ಹಣ್ಣಿನ ಗಡದ ಕೆಳಗೆ ನಿದ್ರೆಮಾಡಿರುವಳು, ಸುಖ ನಿದ್ರೆ. ಶಾಶ್ವತ ನಿದ್ರೆ. ನಿರ್ಮಲೆಯು ಜೀವದಂದಿರುವರೆಗೂ ರಾಜಕೀಯದಲ್ಲಿತ್ತು. ಸರ್ ಸ್ಟಾಫರ್ಡ್ ಕ್ರಿಪ್ಸರು ಅದಕ್ಕೆ ಹಾಲಿನಬುಡ್ಡಿಯನ್ನು ಬಹುಮಾನವಾಗಿ ಕೊಟ್ಟರು ದೇಶದೇಶದಲ್ಲಿ ಪ್ರಸಿದ್ಧ ರಾಜಕೀಯ ನೇತ್ರರೂ ಮಹಾ ಘನರೂ ನಿರ್ಮಲೆಯ ಸರಿಜಯ ಮಾಡಿಕೊಳ್ಳುತ್ತಿದ್ದರು. ನಿರ್ಮಲೆಯದು ನಿರಂಕುಶ ಜೀವನ. ಒಂ ಹೊಂದು ಬಾರಿ ಗಾಂಧೀಜಿ ಕಸ್ತೂರಿ ಬಾಯಿಗಳ ಮೇಲೆ ಹಾಯುತ್ತಾ ಹೋಗುತ್ತಿತ್ತು. ಕಾಂಗ್ರೆಸ್ಸು ವರ್ಕಿಂಗು ಕಮಿಟಿ ಸಭೆಗಳಲ್ಲಿಯೂ ಇಣಿಕಿ ನೋಡುತ್ತಾ ಇರುತ್ತಿತ್ತು. ಜವಹರಲಾಲ ಜೀಯವರ ಅಗ್ರಹಕ್ಕೆ ಕೂಡ ಒಂದು ಬಾರಿ ನಿರ್ಮಲೆಯು ಗುರಿಯಾದಳು. ಈಗ ಆಕೆ ಸೇವಾಗ್ರಾಮದಲ್ಲಿ ವಿಶ್ರಾಂತಿಯನ್ನನುಭವಿಸುತ್ತಿರುವಳು.

——

ಪಠಾಣಿಸ್ತಾನ ಸ್ವತಂತ್ರ ಸ್ಥಾಪನೆಯಾಗಬೇಕೆಂದು ಅಫ್ಘಾನಿಸ್ತಾನವು ಪಾಕಿಸ್ತಾನವನ್ನು ಒತ್ತಾಯಪಡಿಸುತ್ತಿದೆ.

ಚಿಂತಾವಣಿ—ಇಲ್ಲಿ ಪ್ರಧಾನಿ ರೆಡ್ಡಿಯವರ ಮಾಡಿದ ಭಾಷಣದಲ್ಲಿ, ರೈತುವಾರಿ ಪದ್ಧತಿ ಜಾರಿಗೆ ತರುವ ಮತ್ತು ಚಿಕ್ಕ ಜಮೀನ್ದಾರಿ ಪದ್ಧತಿ ಜಾರಿ ಮಾಡುವದು ಪರ್ಯಾಲೋಚನೆಯಲ್ಲಿರುವುದೆಂದು ತಿಳಿಸಿರುವರು

ಜರೂಸೆಲಂ ಫೆ 22— ಈ ದಿನ ಇಲ್ಲಿನ ನೂತನ ಯಹೂದಿ ವ್ಯಾಪಾರ ವನ್ನು ಮತ್ತು ವಾಸದ ಕೇಂದ್ರವಾದ ಬೆಕ್ ಯಹೂದಿ ಬೀದಿಯಲ್ಲಿ ಅತ್ಯಂತ ಭಾರಿ ಬಾಂಬು ಸ್ಫೋಟನವಾಗಿ ತುಂಬಾ ಸಾವು ನೋವೂ ಆಸ್ತಿನಷ್ಟವೂ ಆಗಿದೆ

ಕೈರೋ ಫೆ 22— ಯೇರ್ಮಕ್ ಅರಸರ ಕೂಲೆಗೆ ಆತನ 8 ಮಂದಿ ಮಕ್ಕಳೇ ಕಾರಣರೆಂಬ ಊಹಾಪೋಹ ಬಲವಾಗಿದೆ.

ಅಹಮದಾಬಾದು— ಗಾಂಧೀಜಿಗೆ ಕೃತಜ್ಞತೆಯಿಂದ ಕೋಮುವಾರು ಭಾವನೆಯನ್ನು ತ್ಯಜಿಸಿರೆಂದು ಬ್ಯಾರ್ಲಿಯವರು ಮುಸ್ಲಿಂರಿಗೆ ಹಿತಬೋಧನೆ ಮಾಡಿರುವರು.

ಮದರಾಸು— ವಿಶ್ವವಿದ್ಯಾನಿಲಯದ ಸಮಾರಂಭ ನಡೆದು 933 ಜನ ಗ್ರಾಜುಯೇಟುಗಳಾದರು.

ರಾಬರ್ಟಸನ್ ಪೇಟೆ.... ಬಾರಿಂಗಪೇಟೆಯಲ್ಲಿ ಪಾನನಿರೋಧ ಜಾರಿಗೆ ಬರುವುದೆಂದು ಪ್ರಧಾನಿ ರೆಡ್ಡಿಯವರು ಹೇಳಿರುವರು

ಬಂಗನಪಲ್ಲಿ ಸಂಸ್ಥಾನವು ಮದರಾಸು ಪ್ರಾಂತದಲ್ಲಿ ವಿಲೀನವಾಯಿತು

ಅಮೇರಿಕಾ ಪೆನಾಮಾದಲ್ಲಿನ ತನ್ನ ನಿಲ್ದಾಣಗಳನ್ನು ಬಿಟ್ಟುಕೊಟ್ಟಿದೆ

ಕಂಚಿ— ವಿಭಜನೆಗೆ ಮುಂಚೆ ಇದ್ದ ಭಾಂತದ ಎಲ್ಲಾ ಸಾಲಗಳಿಗೂ ಇಂಡಿಯನ್ ಯೂನಿಯನ್ನೇ ಜವಾಬ್ದಾರಿಯೆಂದೂ ಪಾಕಿಸ್ತಾನ ಪಾಲಿಗ ಬೀಳುವ ಸಾಲವನ್ನು ಅದು ಇಂಡಿಯಾ ಯೂನಿಯನ್ನಿಗೆ 50 ವರ್ಷಗಳಲ್ಲಿ ಕಂತಿನ ವೇರೆ ಪಾವತಿಮಾಡುವುದೆಂದೂ ಹೇಳಲಾಗಿದೆ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಆರೋಗ್ಯವುಂಟು. ಮನಸ್ಸು ಚಿಂತೆಗೀಡು, ನಿರುತ್ಸಾಹತೆ ಹೆಚ್ಚಾಗಿರುತ್ತದೆ, ವ್ಯವಹಾರದಲ್ಲಿ ಲಾಭ ವಿರುವುದಿಲ್ಲ

ವೃಷಭ — ಗೃಹಕಲಹಗಳ ಭಯ ಅನಾರೋಗ್ಯ ಭಯ, ವ್ಯವಹಾರದಲ್ಲಿ ಗೊಂದಲದ ಭಯ.

ಮಿಥುನ — ಶರೀರಾರೋಗ್ಯ ಉಂಟು, ಗುರುಹಿರಿಯರ ಸಹವಾಸವು ದೊರೆಯುವುದು, ವ್ಯವಹಾರದಲ್ಲಿ ಜಯ ಮತ್ತು ಆರ್ಥಿಕ ಲಾಭ

ಕರ್ಕಾಟಕ—ಧನನಷ್ಟ ಆರೋಗ್ಯ ನಷ್ಟ, ಬಂಧುಗಳೊಡನೆ ಕಲಹ

ಸಿಂಹ— ಶರೀರ ಪ್ರಕೃತಿ ಚೆನ್ನಾಗಿರುವುದಿಲ್ಲ ವ್ಯವಹಾರದಲ್ಲಿಯು ತೊಂದರೆ ಖರ್ಚು ಹೆಚ್ಚು

ಕನ್ಯ—ಅನಾರೋಗ್ಯ ಭಯ, ಕೃತಘ್ನರಿಂದ ತಾಪತ್ರಯ ಧನವ್ಯಯ.

ತುಲ— ಶತ್ರುಗಳು ಪರಾಜಿತರಾಗುವರು, ಧನಲಾಭ ವ್ಯವಹಾರದಲ್ಲಿಜಯ:

ವೃಶ್ಚಿಕ— ಧನ ಲಾಭ ವ್ಯವಹಾರದಲ್ಲಿ ಜಯ ಮತ್ತು ಮಾನಸನನ್ಮಾನ

ಧನಸ್ಸು — ಆರೋಗ್ಯ ಧನಲಾಭ ವ್ಯವಹಾರದಲ್ಲಿ ಕೀರ್ತಿ ಧರ್ಮಕಾರ್ಯದಲ್ಲಿ ಆಸಕ್ತಿ

ಮಕರ— ನಷ್ಟಕರವಾದ ವಾರ, ಅನಾರೋಗ್ಯ ಭಯ, ಮಿತ್ರರ ಸಹಾಯ ಸಿಕ್ಕೆಬಹುದು

ಕುಂಭ—ಸ್ನೇಹಿತರ ವಿಯೋಗವಾಗಬಹುದು, ಚಿಂತೆ ತಲೆದೋರುತ್ತಿರುತ್ತೆ.

ಮೀನ — ವ್ಯವಹಾರದಲ್ಲಿ ಲಾಭ ವಿಶ್ರಮ ಸಹಾಯವುಂಟು

ಜೋಗ್ ಫೆ ೭೭.... ಇಲ್ಲಿ ಸ್ಥಾಪಿತವಾಗಿರುವ ವಿದ್ಯುಚ್ಛಕ್ತಿ ಕೇಂದ್ರದ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ನಿನ್ನೆ ನೆರವೇರಿಸಿ ಅದಕ್ಕೆ ಮಹಾತ್ಮಾ ಗಾಂಭೀಜಿಯವರ ನಾಮಾಂಕಿತ ಇಟ್ಟರು

ವುಡ್ ಲ್ಯಾಂಡ್ಸ್

20—2—48 ರಿಂದ

ಇಂದುಮತಿ, ರೆಹಾನಾ

ನಾಜಿರ್ ಖಾನ್

ಪಾತ್ರವಹಿಸಿರುವ

ಷೇನಾಯ್

(ಅಮೋಘ ಹಿಂದೀ ಚಿತ್ರ)

ಪ್ರತಿ ದಿನ 3 ಆಟಗಳು

—An Everything Release —

At Opera

From 20—2—48

BIG NOISE

— with —

LAURAL & HARDY

Daily 3 Shows

ಸೌರಾಷ್ಟ್ರ ಒಕ್ಕೂಟ

ಶ್ರೀ ಜಗದ್ಗುರುಗಳ ಶುಭಾಶಯ

ಸ್ವಂ. ಸು. ತಂತಿ] ಕಲೋಲ್ ಫೆ ೭.

†† ಜಾಂ ಸಾಹೇಬ್ ರಾಜಪ್ರಮುಖ್, ಭಾವನಗರ ಮಹಾರಾಜರು, ದರಾಂಗ್ಧ್ರ ಮೊರ್ವಿ ಮುಂತಾದ ಪ್ರಭುಗಳು, ಕೊಟ್ಟಾ ಸಂಸ್ಥಾನದ ಅರಸರು, ರಾಜಮಂಡಲ ಸದಸ್ಯರುಗಳು ಮತ್ತು ಸೌರಾಷ್ಟ್ರ ಒಕ್ಕೂಟದ ಪ್ರಧಾನ ಧೀ ಭಾರ್ ಭಾಯ್, ಇವರುಗಳಿಗೆ ಶ್ರೀ ದ್ವಾರಕಾ ಸುಸ್ಥಾನದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿಗಳವರು ಚಿನಾವಣೆಯಾದ ಬಗ್ಗೆ ಅಭಿನಂದನಾ ಮತ್ತು ಶುಭಾಶಯಗಳನ್ನು ತಾವಿನ ಮೂಲಕ ತಿಳುಹಿಸಿದ್ದಾರೆ

ಪ್ರಾಚೀನ ಹಿಂದೂಧರ್ಮ ಮತ್ತ ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ಸ್ಪಷ್ಟೀಕರಿಸಿದ ಮತ್ತು ಅಭಿಯೋಗ ಮಾಡಿದೆ ಧರ್ಮರಕ್ಷಣೆ ಮಾಡಬೇಕು— ಎಂದ ಶುಭಾಶಯ ತಾರಿನಲ್ಲಿ ಶ್ರೀ ಜಗದ್ಗುರುಗಳು ಒತ್ತಾಯಪಡಿಸಿದ್ದಾರೆ.

ಶ್ರೀ ಜಗದ್ಗುರುಗಳ ಭಾಷಣ

ಅನೇಕ ಶತಮಾನಗಳ ತರುವಾಯ ಈಗ ಅಖಿಲ ಕಾಥೇವಾರ ಪ್ರದೇಶ ಒಕ್ಕೂಟವಾದದ್ದು ಸಂತಸದಾಯಕ ವಿಷಯ. ಕಾಥೆಯವಾರ ಶ್ರೀಕೃಷ್ಣನ ಆಳ್ವಿಕೆಯಲ್ಲಿತ್ತು ಸೌರಾಷ್ಟ್ರ ಪ್ರಭುತ್ವ ಶ್ರೀಕೃಷ್ಣನ ಆಡಳಿತ ಮತ್ತು ಬೋಧನೆಯನ್ನನುಸರಿಸಲಿ. ಸರಕಾರವು ಧರ್ಮರಕ್ಷಣೆಯನ್ನು ಮಾಡಲೇಬೇಕು. ಪ್ರಾಚೀನ ಸಂಪ್ರದಾಯಾಚರಣೆಗಳಲ್ಲಿ ಕೈಹಾಕಕೂಡದು. ಶಾಸನಮೂಲಕ ಅಥವಾ ಇತರೇ ಮೂಲಕ ಧರ್ಮಚ್ಯುತಿಯನ್ನು ಆಚರಣೆಗೆ ತರಕೂಡದು. ಸೌರಾಷ್ಟ್ರ ಅಖಿಲ ಭಾರತಕ್ಕೆ ಮಾದರಿಯಾಗಬೇಕು. ಧರ್ಮವಿರುದ್ಧವೆಂದ ಪದ್ಧತಿ ಪ್ರಕಾರ ಆಡಳಿತದಿಂದ ಸೌರಾಷ್ಟ್ರಕ್ಕೆ ವಿಜಯ ಕೀರ್ತಿಯನ್ನು ದೇವರು ಕರುಣಿಸಲಿ. ಪ್ರಜೆಯು ಮತ್ತು ಪ್ರಭುತ್ವ ಸಂಪೂರ್ಣ ಶಾಂತಿ ಮತ್ತು ಶಕ್ತಿಗಾಗಿ ದುಡಿಯಲಿ ಭಾರತವನ್ನು ಶಾಂತಿ ಮತ್ತು ಸುಭಿಕ್ಷವಾಗಿಯು ವಂತೆ ದೇವರು ಹಂಸಲಿ

— ಹೀಗೆಂದು ಶ್ರೀಜಗದ್ಗುರುಗಳು ಪ್ರಚಂಡ ಸಭೆಯಲ್ಲಿ ತಿಳಿಸಿದರು.

ಪ್ರಭಾ ಪಿಕ್ಚರ್ ಹೌಸ್

೨೨-೨-೪೮ ರಿಂದ

ಯಶಸ್ವಿಯಾದ 2 ನೇ ವಾರ

ದಿನವಹಿ ೩ ಆಟಗಳು

— ಭರಣಿಯವರ —

ರತಮಾಲ (ತೆಲುಗು)

ಪಾತ್ರ: ಬಿ

ತಾ॥ 23-2-48 ॥ ಶ್ರೀ॥ ನಂ. 76

"ಪ್ರ ಬೋ ಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವನೊಗ್ಗ ಜಿಲ್ಲಾ

ದೇವಾಲಯ ಪ್ರವೇಶ

(ಕಳೆದ ಸಂಚಿಕೆಯಿಂದಮುಂದುವರಿದುದು)

ದುಂಡು ಮೇಜು ಸಭೆಯು ಭಾರತದಲ್ಲಾಗಿದ್ದರೆ ಗಾಂಧಿಜಿ ಮಹಾಪ್ರಭು ಏನ ಮೇಲಿನ ಪ್ರಶ್ನೆಗೆ ಉತ್ತರಕೊಡಬಹುದಾಗಿತ್ತು. ಆಗ ನಾವು ' ಸ್ಪೃಶ್ಯಾಸ್ಪೃಶ್ಯಕ್ಕೂ ಜಯಾಪಜಯಕ್ಕೂ ಏನೂ ಸಂಬಂಧವಿಲ್ಲ, ಧರ್ಮಭೀ ಮುಸಲ್ಮಾನರೂ ನೀವುಗಳೂ ಜೀತ್ಯಗಳಾದಾಗ್ಯೂ ಅಸ್ಪೃಶ್ಯರೇ ' ಎನ್ನಬಹುದಾಗಿದ್ದಿತು. ಆದರೆ ಅವರೊಂದಿಗೆ ಮಹಾಪ್ರಸಾದವನ್ನು ಪಡೆದಾಗಿದ್ದ ಆ ಮುಖಂಡರು ಈ ಉತ್ತರವನ್ನು ಹೇಗೆ ಕೊಟ್ಟಾರು ?

ಹೇಗೆ ಇಂಜಿನು ಕೆಟ್ಟುಹೋದುದಕ್ಕೆ ಡಾಕ್ಟರರ ಸಮ್ಮತಿಯು ಪ್ರಮಾಣವಲ್ಲವೋ, ಹಾಗೆ ಶರೀರದ ಬೇನೆಯಿಲ್ಲಿ ಇಂಜನಿಯರರ ಸಮ್ಮತಿಗೆ ಏನೂ ಬೆಲೆಯಿಲ್ಲ. ಇದೇ ಪ್ರಕಾರ ಧರ್ಮದ ವಿಷಯದಲ್ಲಿ ಈ ಮುಖಂಡರುಗಳ ಮಾತಿಗೇನೂ ಬೆಲೆಯಿಲ್ಲ. ಅವರಿಂದ ಧಾರ್ಮಿಕ ಹಕ್ಕನ್ನು ಕಿರಿಯುವ ಆಶೆಯನ್ನೂ ಇಡಲಾಗದು.

ಮುಖಂಡರುಗಳಿಂದ ಹಿಮಾಲಯದಂತಹ ತಪ್ಪು ಆಗಬಿಡತ್ತದೆ ಆದರೆ ಸಾಕ್ಷಾತ್ಕೃತ ಧರ್ಮರು ಇಂಥ ಅಪರಾಧವಾಗಲಾರದು. ಯಾವ ಸಮಯ ಅನ್ಯರಾಜರುಗಳು ಸಮಾಜದ ಪ್ರವಾಹದೊಂದಿಗೆ ತೇಲಿಹೋದರೋ ಆ ಸಮಯದಲ್ಲಿ ಮಹಾರಾಣಾ ಪ್ರತಾಪನು ಧರ್ಮದಲ್ಲಿ ಕದಲದೆ ನಿಂತನು ಸಮಯವು ಮಗುಚಿತು. ಸಮಯಸೇವಿಗಳಾದ ಆ ಕಾಲದ ನೀತಿಕುಶಲರು ಹೇಯದೃಷ್ಟಿಯಿಂದ ನೋಡಲ್ಪಡುತ್ತಾ ಸಿ. ಆದರೆ ಮಹಾರಾಣಾ ಪ್ರತಾಪನ ಸರು ಧರ್ಮಸ್ಥೈರ್ಯ ಕಾರಣ ಅವರು ಗಿ ಹೋಯಿತು. ಇದೇ ರೀತಿ ಳು ಎಬ್ಬಿಸಲ್ಪಡುತ್ತಿದೆ, ಹಾಗೂ ಎಲ್ಲ ಯುಗಳ ಔಚಿತ್ಯಕ್ಕಾಗಿಯೂ ಒಂದೊಕ್ಕಿಂತೊಂದು ಹೆಚ್ಚಿನ ಯುಕ್ತಿಗಳು ತೋರಿಸಲ್ಪಡುತ್ತಿವೆ ಖಿಲಾಫತ್ ಚಳವಳಿ ಎದ್ದಿತು, ಉಪ್ಪಿನ ಚಳವಳಿ ಎದ್ದಿತು ಸರ್ಕಾರೀ ನೌಕರಿ ಬಿಡುವ ಚಳವಳಿ ಎದ್ದಿತು. ಕಾಲೇಜ್ ಸ್ಕೂಲಿನಲ್ಲಿ ಕಲಿಯುವುದು ಪಾಪವೆನ್ನಲಾಯಿತು. ವಿದ್ಯಾಪಾನ ನಿರೋಧ ಚಳವಳಿಯದ್ದಿತು ಪಾಖಾನೆ ಸ್ವಚ್ಛಗೊಳಿಸುವ ಚಳವಳಿ ಎದ್ದಿತು. ಇವುಗಳೊಳಗೆ ಎಷ್ಟೋ ಕೆಲವಂಶಗಳಲ್ಲಿ ಧರ್ಮವಿರೋಧಿಗಳೂ ಇದ್ದವು. ಆದ್ದರಿಂದ ಈ ಕೆಲದಿನದ ಚಳವಳಿಗಾಗಿ ಧರ್ಮದ ಸಿದ್ಧಾಂತಗಳಲ್ಲಿ ಪರಿವರ್ತನ ಮಾಡಲಾಗದು.

ಅಸ್ಪೃಶ್ಯತೆಯನ್ನು ತೊಲಗಿಸುವ ಪ್ರಯತ್ನವು ಗೌತಮ ಬುದ್ಧನ ಕಾಲದಿಂದ ನಡೆಯುತ್ತಾ ಬಂದಿದೆ ನಮ್ಮ ಮುಖಂಡರಿಗಾದರೋ ದಂಡವೇ ಪಿಡಿದು ಸಮ್ಮೇಳನವಾದ ಮೇಲೆ ಅಸ್ಪೃಶ್ಯರಲ್ಲಿ ದಯೆ ಬಂದಿದೆ ಆದರೆ ಇದು ಸಿದ್ಧಾಂತವು ಎಷ್ಟು ದೃಢವಾಗಿದೆಯೆಂದರೆ ಏ ಚಾರಶೀಲರು ಎಲ್ಲಿ ಇದುವರೆಗೂ ಅಲ್ಲಿಂದ ಇದನ್ನು ಯಾರೂ ತೊಲಗಿಸಲಾರರು.

ನಾಲ್ಕನೆಯುದಾಗಿ ' ಅಸ್ಪೃಶ್ಯರೂ ಋಷಿಗಳ ವಾಕ್ಯದಲ್ಲಿ ವಿಶ್ವಾಸವಿಡುತ್ತಾರೆ, ದೇವಾಲಯವನ್ನು ಸನ್ಮಾನಿಸುತ್ತಾರೆ ಮೂರ್ತಿಗಳ ಮೇಲೆ ಪೂಜ್ಯ ದೃಷ್ಟಿಯನ್ನಿಡುತ್ತಾರೆ, ಆದಾಗ್ಯೂ ಅವರನ್ನು ದೇವಾಲಯ ಪ್ರವೇಶದಿಂದ ತಡೆಯುವುದು ಅಕ್ಷಮ್ಯವಾದ ಅಪರಾಧ ಎಂಬ ಮಾತು ಸರಿಯೇ. ಅಸ್ಪೃಶ್ಯರು ಋಷಿಗಳ ವಾಕ್ಯದಲ್ಲಿ ವಿಶ್ವಾಸವಿಡುತ್ತಾರೆ, ದೇವಾಲಯವನ್ನು ಸನ್ಮಾನಿಸುತ್ತಾರೆ, ಮೂರ್ತಿಗಳ ಮೇಲೆ ಪೂಜ್ಯದೃಷ್ಟಿಯನ್ನಿಡುತ್ತಾರೆ, ಆದಾಗ್ಯೂ ಅವರನ್ನು ದೇವಾಲಯ ಪ್ರವೇಶದಿಂದ ತಡೆಯುವುದು ಅಕ್ಷಮ್ಯವಾದ ಅಪರಾಧವೆ